ಸಿ.ಸಿ.ನಂ.876/2023

ಡಿ.ಡಬ್ಲೂಃ 1

ದಿನಾಂಕಃ 10/12/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪಿರ್ಯಾದು ಪರ ವಕೀಲರಿಂದ**

7. ನಾನು ಹೇಳುವ ಹಾಗೆ 2017-18 ನೇ ಇಸವಿಯಲ್ಲಿ ಆಗಿದಂತಹ ವ್ಯವಹಾರಕ್ಕೂ ಮತ್ತು ಈ ಪ್ರಕರಣಕ್ಕೆ ಸಂಬಂಧಿಸಿದ ವ್ಯವಹಾರಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸುಳ್ಳು. ನಿಪಿ-1 ನಮ್ಮ ಕಂಪನಿಯ ಚೆಕ್ ಆಗಿರುತ್ತದೆ. ಸಾಮಾನ್ಯವಾಗಿ ನಾನು ನಮ್ಮ ಕಂಪನಿಯ ಚೆಕ್ಕನ್ನು ಯಾರಿಗಾದರೂ ನೀಡಬೇಕಾದರೆ ಆ ಚೆಕ್ಕನ್ನು ನಾನು ಬರೆದುಕೊಡುತ್ತೇನೆ ಎಂದರೆ ಸರಿ. ದಿನಾಂಕ 07.03.2023 ರಂದು ನಾನು ಪಿರ್ಯಾದುದಾರರಿಂದ ಪಡೆದುಕೊಂಡಂತಹ ರೂ.8,75,000/- ಗಳಿಗೆ ಸಂಬಂಧಿಸಿದಂತೆ ನಿಪಿ-1 ಚೆಕ್ಕನ್ನು ಬರೆದು ಕೊಟ್ಟಿರುತ್ತೇನೆ ಎಂದರೆ ಸುಳ್ಳು. ಅದೇ ರೀತಿ ಸದರಿ ದಿನದಂದು ನಾನು ಪಿರ್ಯಾದುದಾರರಿಗೆ ನಿಪಿ-7 ದಾಖಲೆಯನ್ನು ಬೆರಳಚ್ಚು ಮಾಡಿಸಿ ಕೊಟ್ಟಿರುತ್ತೇನೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ನಾನು ಖಾಲಿ ದಾಖಲೆಯನ್ನು ಕೊಟ್ಟಿದ್ದೇನು ಎಂದು ನುಡಿಯುತ್ತಾರೆ. ನಾನು ಹೇಳಿದ ಹಾಗೆ ನಿಪಿ-1 ಮತ್ತು 7 ದಾಖಲೆಗಳನ್ನು ಪಿರ್ಯಾದುದಾರರಿಗೆ ಖಾಲಿ ದಾಖಲೆಯಾಗಿ ಕೊಟ್ಟಿದ್ದೇನು ಎಂದು ಹೇಳಿ ನಾನು ನೀಡಿದಂತಹ ನಿಪಿ-6 ಪ್ರತಿಯುತ್ತರದಲ್ಲಿ ತಿಳಿಸಿರುವುದಿಲ್ಲ. ನಾನು ಪಿರ್ಯಾದುದಾರರಿಗೆ ಹಣವನ್ನು ಕೊಡುವ ಹೊಣೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಜಯಲಕ್ಷ್ಮೀ ಎನ್. ಬಿ)
ಪ್ರಧಾನ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ
ಕೆಜಿಎಫ್